


# ಅಬ್ಬಾ.. ಕಲ್ಲಂಗಡಿ!

ಕಲ್ಲಂಗಡಿ ಹಣ್ಣು ಹೆಚ್ಚೆಂದರೆ ಎಷ್ಟು ಕೇಜಿ ತೂಗಬಹುದು? ಇಪ್ಪತ್ತು ಕೇಜಿ ತೂಗಿದರೆ ಅದೇ ಅಚ್ಚರಿ. ಈಗ ಇದಕ್ಕಿಂತಲೂ ಅಚ್ಚರಿಯ ಸಂಗತಿ ಎಂದರೆ ಪೂರ್ವ ಟೆನ್ನೆಸ್ಸಿಯ ರೈತ ಕ್ರಿಸ್ ಕೆಂಟ್ ಬೆಳೆದ ಕಲ್ಲಂಗಡಿ ಹಣ್ಣು ಬರೊಬ್ಬರಿ 500 ಕೇಜಿ ತೂಗುತ್ತದೆ. ಸುಮಾರು ಇನ್ನೂರು ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಈತ ಇದನ್ನೇ ಬೆಳೆದಿದ್ದಾನೆ.

ಕೇವಲ ಕಲ್ಲಂಗಡಿ ಬೆಳೆಯುವುದೇ ಅವನ ಆಸಕ್ತಿಯ ವಿಷಯವಲ್ಲ. ತೂಕದಲ್ಲಿ, ಎತ್ತರದಲ್ಲಿ ಅದು ದಾಖಲೆ ಮಾಡಬೇಕೆಂಬ ಬಯಕೆಯಿಂದ ವಿಶೇಷ ಆಸಕ್ತಿ ವಹಿಸಿ ಇದನ್ನು ಬೆಳೆಯುವುದು ಅವನ ಹವ್ಯಾಸವಂತೆ. ಹೀಗಾಗಿ ಪ್ರತಿಯೊಂದು ಕಲ್ಲಂಗಡಿಯೂ ಸರಾಸರಿ 250 ಪೌಂಡ್ (ಅಂದಾಜು 500 ಕೇಜಿ) ತೂಗುತ್ತದೆ. ಆದರೆ ಒಂದು ಅತಿ ದೊಡ್ಡ ಹಣ್ಣು 350. 5 ಪೌಂಡ್ ಭಾರವಿತ್ತು. ಇನ್ನೊಂದು 316 ಪೌಂಡ್ ತೂಗಿತು. ಇಷ್ಟು ಭಾರವಿರು ವುದನ್ನು ಬಂಡೆಯಂತೆ ಹೊರಳಿಸದೆ ಹೊತ್ತುಕೊಂಡು ಬರಲು ಸಾಧ್ಯವೆ?

ಈ ಹಿಂದೆ ಕ್ರಿಸ್ ಬೆಳೆದ ಒಂದು ಕಲ್ಲಂಗಡಿ ವಿಶ್ವ ದಾಖಲೆಯನ್ನೇ ಮಾಡಿತು. ಅದು 847 ಪೌಂಡ್ ಭಾರವಿತ್ತು. ಅನಂತರ ಅಷ್ಟು ದೊಡ್ಡ ಹಣ್ಣು ಬೆಳೆಯಲು ಅವನಿಂದಾಗದಿದ್ದರೂ ಅವನಲ್ಲಿ ಬೆಳೆಯುವ ಸಾಮಾನ್ಯ ಗಾತ್ರದ ಹಣ್ಣನ್ನು ಬೆಳೆಯಲೂ ಬೇರೆಯವರು ಸಫಲರಾಗಿಲ್ಲವಂತೆ.

■ ಪ.ರಾಮಕೃಷ್ಣ ಶಾಸ್ತ್ರಿ